**Fax:** 08282-256262 Phone No - 08282-256149
**E-mail**:**ku @ kuvempu.ac.in** **Website:**www.kuvempu.ac.in

# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯಕಾ ರ್ಯಾಲಯ, ಕುವೆಂಪು ಶತಮಾನೋತ್ಸವ ಭವನ, ಜ್ಞಾನ ಸಹ್ಯಾದ್ರಿ,
ಶಂಕರಘಟ್ಟ – 577 451, ಶಿವಮೊಗ್ಗ ಜಿಲ್ಲೆ.

ಸಂಖ್ಯೆ:ಕುವಿ:ಶೈವಿ:ಎಸಿ–5: 2863 :2017–18 ದಿನಾಂಕ:28–08–2017

## ಸುತ್ತೋಲೆ

**ವಿಷಯ: 2017–18ನೇ ಶೈಕ್ಷಣಿಕ ಸಾಲಿನಲ್ಲಿ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ಬಗ್ಗೆ.**

ಉಲ್ಲೇಖ:1. ಕುವಿ/ಶೈವಿ:ಎಸಿ–3(56):2004–05:1972:ದಿ:16–07–2005
2. ಕುವಿ/ಶೈವಿ:ಎಸಿ–1:ಬಿಸಿಎ(9):2005–06:2407:ದಿ:01–08–2005
3. ಸುತ್ತೋಲೆ ಸಂಖ್ಯೆ:ಕುವಿ:ಶೈವಿ:ಎಸಿ–5:817:2017–18, ದಿನಾಂಕ:18–05–2017.

****

2016–17ನೇ ಸಾಲಿನವರೆಗೂ ವಿಶ್ವವಿದ್ಯಾಲಯ ಸಂಯೋಜಿತ ಕಾಲೇಜುಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿಗಳನ್ನು ಕೈಪಿಡಿಯಾಗಿ ತಯಾರಿಸಿ ಮೂಲ ದಾಖಲಾತಿಗಳೊಂದಿಗೆ ಪ್ರವೇಶಾನುಮೋದನೆಗಾಗಿ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿತ್ತು, ಶೈಕ್ಷಣಿಕ ವಿಭಾಗದಿಂದ ಪ್ರವೇಶಾನುಮೋದನೆಯಾದ ವಿದ್ಯಾರ್ಥಿಗಳ ವಿವರಗಳನ್ನು ಪರೀಕ್ಷಾ ವಿಭಾಗದ ಸಾಪ್ಟ್‌ವೇರ್‌ನಲ್ಲಿ ನಮೂದಿಸಿದ ನಂತರ ನೊಂದಣಿ ಸಂಖ್ಯೆಯನ್ನು ನೀಡಲಾಗುತ್ತಿದ್ದು ಈ ಎಲ್ಲಾ ಕಾರ್ಯಗಳಿಗೆ ಸಾಕಷ್ಟು ಸಮಯ ವ್ಯರ್ಥವಾಗುತ್ತಿರುವುದರಿಂದ ಪ್ರವೇಶಾನುಮೋದನೆ ವ್ಯವಸ್ಥೆಯನ್ನು ಸರಳೀಕರಿಸಿ ಮತ್ತು ತ್ವರಿತಗೊಳಿಸುವ ಸಲುವಾಗಿ 2017–18ನೇ ಶೈಕ್ಷಣಿಕ ಸಾಲಿನಿಂದ ಸ್ನಾತಕ ಪದವಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಮಾಹಿತಿಗಳನ್ನು ಆನ್‌ಲೈನ್ ಮೂಲಕ ನಮೂದಿಸುವ ವ್ಯವಸ್ಥೆಯನ್ನು ಮಾರ್ಪಡಿಸಲಾಗಿದೆ.

2017–18ನೇ ಸಾಲಿನ **ಪ್ರಥಮ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳು ಕರ್ನಾಟಕ ಸರ್ಕಾರದ ಪದವಿ ಪೂರ್ವ ಮಂಡಳಿ/ಹೊರರಾಜ್ಯ ಪರೀಕ್ಷಾ ಮಂಡಳಿ ಹಾಗೂ ಸಿ.ಬಿ.ಎಸ್.ಇ.ಯಲ್ಲಿ ಉತ್ತೀರ್ಣರಾಗಿರುವ ಎಲ್ಲಾ ವಿದ್ಯಾರ್ಥಿಗಳ ಪ್ರವೇಶಾತಿ ಸಂಬಂಧಿಸಿದ ಎಲ್ಲಾ ದಾಖಲಾತಿಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಣವಾದ ನಂತರ ಈ ಹಿಂದೆ ಪರೀಕ್ಷಾ ವಿಭಾಗದಿಂದ ನೀಡಿದ ಸಾಪ್ಟ್‌ವೇರ್‌ನಲ್ಲಿ ಕೆಲವು ಮಾರ್ಪಾಡುಗಳೊಂದಿಗೆ ತಮ್ಮ ಕಾಲೇಜಿಗೆ ನೀಡಿದ User Name ಬಳಸಿಕೊಂಡು **ದಿನಾಂಕ:09–09–2017ರೊಳಗಾಗಿ ಕಡ್ಡಾಯವಾಗಿ** ಆನ್‌ಲೈನ್ ಮೂಲಕ ಸಾಫ್ಟವೇರ್‌ನಲ್ಲಿ ನಮೂದಿಸಲು ಸೂಚಿಸಲಾಗಿದೆ. (ಆನ್‌ಲೈನ್‌ನಲ್ಲಿ ನಮೂದಿಸುವ ವಿಧಾನದ ಬಗ್ಗೆ Flow chartನ್ನು ಈ ಪತ್ರದೊಂದಿಗೆ ಲಗತ್ತಿಸಿದೆ).

ಶೈಕ್ಷಣಿಕ ವಿಭಾಗದಿಂದ ಆನ್‌ಲೈನ್ ಮೂಲಕವೇ ವಿದ್ಯಾರ್ಥಿಗಳ ಪ್ರವೇಶಾತಿಯನ್ನು ಅನುಮೋದಿಸಲಾಗುವುದು, ಅನುಮೋದನೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಸಾಪ್ಟ್‌ವೇರ್‌ನಿಂದ Download ಮಾಡಿ ಮುದ್ರಿಸಿಕೊಂಡು ವಿದ್ಯಾರ್ಥಿಗಳ ಮೂಲ ಅಂಕಪಟ್ಟಿ ಮತ್ತು ಪ್ರವೇಶ ಶುಲ್ಕಗಳೊಂದಿಗೆ ಉಲ್ಲೇಖಿತ (03)ರ ಅನುಬಂಧಗಳಲ್ಲಿ ಭರ್ತಿ ಮಾಡಿ ಸೂಕ್ತ ಪ್ರವೇಶಾತಿ ದಾಖಲೆಗಳನ್ನು ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸಿದ ನಂತರ ಪರೀಕ್ಷಾ ವಿಭಾಗದಿಂದ ನೊಂದಣಿ ಸಂಖ್ಯೆಯನ್ನು ನೀಡಲಾಗುವುದು.

Diploma in Commercial Practice ರಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ನೇರವಾಗಿ ದ್ವಿತೀಯ ವರ್ಷದ ಬಿ.ಕಾಂ. / ಬಿ.ಬಿ.ಎ. ಪದವಿಗೆ ಪ್ರವೇಶವನ್ನು ಪಡೆದ **ಲ್ಯಾಟರಲ್‌ಎಂಟ್ರಿ** ವಿದ್ಯಾರ್ಥಿಗಳು ಹಾಗೂ ಅನ್ಯ ವಿಶ್ವವಿದ್ಯಾಲಯದಿಂದ ವರ್ಗಾವಣೆ ಪಡೆದು **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ವಿವರಗಳನ್ನು ಹಾಗೂ **ಮೂರನೇ ಮತ್ತು ಐದನೇ** ಸೆಮಿಸ್ಟರ್‌ಗೆ ಪ್ರವೇಶ ಪಡೆದ ವಿದ್ಯಾರ್ಥಿಗಳ ಪ್ರವೇಶಾತಿಗೆ ಸಂಬಂಧಿಸಿದ ದಾಖಲಾತಿಗಳನ್ನು ವಿಶ್ವವಿದ್ಯಾಲಯದ ನಿಯಮಾವಳಿ ಪ್ರಕಾರ ಹಾಗೂ ಉಲ್ಲೇಖ(01) ಮತ್ತು (02)ಗಳನ್ನು (ವಿಶ್ವವಿದ್ಯಾಲಯದ ಅಂತರ್ಜಾಲದಲ್ಲಿ ಪ್ರಕಟಿಸಲಾಗಿದೆ) ಎಲ್ಲಾ ವಿವರಗಳನ್ನು ಕಾಲೇಜಿನಲ್ಲಿಯೇ ಪರಿಶೀಲಿಸಿ ದೃಢೀಕರಣವಾದ ನಂತರ ಸೂಕ್ತ ದಾಖಲಾತಿಗಳೊಂದಿಗೆ ಪ್ರಾಂಶುಪಾಲರ ದೃಢೀಕರಣ ಮತ್ತು ಶಿಫಾರಸ್ಸಿನೊಂದಿಗೆ ಶೈಕ್ಷಣಿಕ ವಿಭಾಗಕ್ಕೆ ಸಲ್ಲಿಸುವುದು. ವಿದ್ಯಾರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಬಗ್ಗೆ ವ್ಯತ್ಯಾಸವಾದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆ.

ಉಲ್ಲೇಖಿತ (03)ರಲ್ಲಿ ಹೊರಡಿಸಿದ ಸುತ್ತೋಲೆಯಲ್ಲಿ 2017–18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರವೇಶಾತಿಗೆ ಸಂಬಂಧಿಸಿದಂತೆ ಅನುಸರಿಸಬೇಕಾದ ಸೂಚನೆಗಳನ್ನು ನೀಡಲಾಗಿದ್ದು, ಅವುಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

**Helpline No:81830-98136, 81830-98138.**

ಮಾನ್ಯ ಕುಲಸಚಿವರ
ಅನುಮೋದನೆಯಾಗಿದೆ

ತಮ್ಮ ವಿಶ್ವಾಸಿ,

ಸಹಿ/–
(ಡಾ. ಬಿ. ತಿಪ್ಪೇಸ್ವಾಮಿ)
ಉಪಕುಲಸಚಿವರು(ಶೈಕ್ಷಣಿಕ)

**ಗೆ,**

**ಕುವೆಂಪು ವಿಶ್ವವಿದ್ಯಾಲಯದ ವ್ಯಾಪ್ತಿಗೊಳಪಡುವ ಶಿವಮೊಗ್ಗ/ ಚಿಕ್ಕಮಗಳೂರು ಜಿಲ್ಲೆಯ ಎಲ್ಲಾ ಸ್ನಾತಕ ಪದವಿಗಳ ಸಂಯೋಜಿತ/ ಘಟಕ/ ಸ್ವಾಯತ್ತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.**

**ಪ್ರತಿಗಳು:**

1. ಎಲ್ಲಾ ನಿಕಾಯಗಳ ಡೀನರು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
2. ಆಪ್ತ ಸಹಾಯಕರು, ಕುಲಪತಿಗಳು: ಕುಲಸಚಿವರು:ಕುಲಸಚಿವರು(ಪರೀಕ್ಷಾಂಗ): ಹಣಕಾಸು ಅಧಿಕಾರಿಗಳು, ಕುವೆಂಪು ವಿಶ್ವವಿದ್ಯಾಲಯ, ಶಂಕರಘಟ್ಟ.
3. ರಕ್ಷಣಾ ಕಡತ.
4. ಕಛೇರಿ ಪ್ರತಿ.

## WEBSITE

| | |
|---|---|
| kuvempu.ac.in | Click |
| ↓ | |
| EXAMINATIONS | Click |
| ↓ | |
| Online student information system | Click |
| ↓ | |
| OASIS - Regular | Click |
| ↓ | |
| College code | 101 |
| User Name | Enter User Name |
| Password | Enter Password |
| | login |
| ↓ | |
| Before Examination | |
| ↓ | |
| Admission | |
| ↓ | |
| Admission entry | |